ಬೇಕಾಗಬಹುದು ಎಂಬುದನ್ನು calculate ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಜೋತಿಷ್ಯ ಬರುವುದಿಲ್ಲ.

(ನಗು !)

ಶ್ರೀ ಬಿ. ಹುಚ್ಚೇಗೌಡ.—ಶೇಕಡ ಹದಿನೆಂಟು ಪಾಪ್ಯುಲೇಷನ್ ಇರುವಾಗ ಈ ಶೇಕಡ 16⅔ ಕೊಡ ಬೇಕೆಂಬುದನ್ನು ಯಾವ ಆಧಾರದ ಮೇಲೆ ಗೊತ್ತು ಮಾಡಿದ್ದೀರಿ ? ಆರ್ಬಿಟ್ರೆರಿಯಾಗಿ ಮಾಡಿದ್ದೀರಾ ಅಥವಾ ಯಾವುದಾದರೂ ಒಂದು ಆಧಾರ ಇದೆಯೇ ?

Sri Kadidal MANJAPPA.—Roughly on the population basis.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಶೇಕಡ 16⅔ ನ್ನು ಶೇಕಡ 18 ಗೆ ಏರಿಸುತ್ತೀರಾ ?

Sri Kadidal MANJAPPA.—It is a hypothetical question. It is a question of policy. I cannot say definitely now.

ಶ್ರೀ ಬಿ. ಹುಚ್ಚೇಗೌಡ.—ಶೇಕಡ 16⅔ ಗಿಂತ ಜಾಸ್ತಿ ನಿಯಮಿಸಕೂಡದು ಎಂದು ಇದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಏನೂ ಕಾಣೆ.

ಶ್ರೀ ಬಿ. ಹುಚ್ಚೇಗೌಡ.—ಹೀಗಿರುವಾಗ ಈ ಶೇಕಡಾವಾರು ಜಾಸ್ತಿ ಆಗಬೇಕಾಗಿದ್ದರೆ ಸರ್ವಿಸ್‌ಗೆ ರಿಕ್ರೂಟ್‌ಮೆಂಟ್ ಮಾಡುವುದರಲ್ಲಿ ಹೆಚ್ಚಿನ ಜನಗಳನ್ನು ತೆಗೆದುಕೊಂಡು ಕಾಂಪೆನ್‌ಸೇಟ್ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮ ಇದೆಯೇ ?

Mr. SPEAKER.—That question has been answered more than twice in this very session.

ಶ್ರೀ ಬಿ. ಹುಚ್ಚೇಗೌಡ.—ಕಾಂಪೆನ್‌ಸೇಟ್ ಮಾಡುವುದಕ್ಕೆ ಏನು ಮಾಡಿದ್ದೀರಿ ?

Sri Kadidal MANJAPPA.—That question has been answered, Sir.

ಶ್ರೀ ಬಿ. ಹುಚ್ಚೇಗೌಡ.—ನಾನ್-ಗೆಜೆಟೆಡ್‌ನಲ್ಲಿ ಯಾದರೂ ಕೂಡ ಮಿನಿಮಂ ಅರ್ಹತೆ ಇರುವವರಿಗೆ ಎಷ್ಟು ಜನರ ಅಪ್ಲಿಕೇಷನ್ ಬಂದರೆ ಅಷ್ಟು ಜನರನ್ನೂ ಸೇರಿಸಿಕೊಳ್ಳುವುದಕ್ಕೆ ಪಬ್ಲಿಕ್ ಸರ್ವಿಸ್ ಕಮಿಷನ್ ನವರು ಏರ್ಪಾಡು ಮಾಡಿದ್ದಾರೆಯೇ ?

Sri Kadidal MANJAPPA.—According to rules they will be recruited.

Sri B. HUTCHEGOWDA.—Will you limit to 16 2/3 per cent or will you entertain all applications provided they have got the minimum qualification ?

Sri Kadidal MANJAPPA.—That depends upon circumstances. What is said in the Government order is "not less than 16 2/3 per cent" should be filled by Scheduled Castes people. If there are more qualified candidates, it is open to the P.S.C. to fill up these vacancies according to rules.

"Sadar" Community. (Representation in Services).

Q.—629. **Sri D. M. GOVINDARAJU** (Nelamangala).—

Will the Government be pleased to state :—

(*a*) the population of the 'Sadar' community in the State and the number of graduates in that community ;

(*b*) the names of graduates and the offices in which they are serving at present and the ranks held by them ;

(*c*) whether any graduates of this community have been entertained as probationers ; if so, the departments in which they are entertained ?

A.—**Kadidal MANJAPPA** (Minister for Revenue and Public Works).—

(*a*) As caste tabulation has been abandoned during the Census of 1950, the required information is not available.

(*b*) Since Sadar community is included among Other Caste Hindus no separate figures are available.

(*c*) Does not arise in view of the above reply.

ಶ್ರೀ ಡಿ. ಎಂ. ಗೋವಿಂದರಾಜು.—ಜನಗಣತಿಯಲ್ಲಿ ಕೋಮುವಾರು ಪಟ್ಟಿಮಾಡುವುದನ್ನು ಬಿಟ್ಟು ಬಿಟ್ಟಿದೆ ಎಂದು ಹೇಳಿದ್ದೀರಿ. ಇನ್ನೂ ಮುಂದೆ ಮೈನರ್ ಕಮ್ಯೂನಿಟಿ, ಮೇಜರ್ ಕಮ್ಯೂನಿಟಿ ಎಂಬುದನ್ನು ಯಾವರೀತಿ ಕಂಡುಹಿಡಿಯುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕಮ್ಯೂನಿಟಿಗಳು ಎಂಬ ಪದ ಇರಕೂಡದು, ಹೋಗಬೇಕೆಂಬುದೇ ಉದ್ದೇಶ.

ಶ್ರೀ ಡಿ. ಎಂ. ಗೋವಿಂದರಾಜು.—ಹಾಗಿದ್ದರೆ ಮೈನರ್ ಕಮ್ಯೂನಿಟಿ ಆದ ಈ 'ಸಾದರು' ಕಮ್ಯೂನಿಟಿಗೆ ಹೆಚ್ಚಿನ ಉತ್ತೇಜನ ಕೊಡಲು ಯಾವರೀತಿ ಸಾಧ್ಯವಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—'ಸಾದರು' ಕಮ್ಯೂನಿಟಿ ಎಂಬುದು Other Castes Hindus ಎಂದು ಒಂದು ಪಂಗಡ ಇದೆ. ಅದರಲ್ಲಿ ಸೇರಿದೆ. ಎರಡು ಸಾವಿರ, ಮೂರು ಸಾವಿರ, ನಾಲ್ಕು ಸಾವಿರ, ಐದು ಸಾವಿರ ಇರತಕ್ಕ ಒಂದೊಂದು ಕಮ್ಯೂನಿಟಿಯನ್ನು ಕೂಡ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಪ್ರತ್ಯೇಕ ಕಮ್ಯೂನಿಟಿ ಎಂಬುದಾಗಿ ಪರಿಗಣಿಸಿಲ್ಲ. ಅವನ್ನೆಲ್ಲಾ ಒಟ್ಟಿಗೆ ಸೇರಿ Other Castes Hindus ಎಂದು ಮಾಡಿದ್ದಾರೆ.

ಶ್ರೀ ಡಿ. ಎಂ. ಗೋವಿಂದರಾಜು —ಈ "ಸಾದರ್' ಕಮ್ಯೂನಿಟಿ ಬಹಳ ಮೈನರ್ ಕಮ್ಯೂನಿಟಿ ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಡಿ. ಎಂ. ಗೋವಿಂದರಾಜು.—ಈ ಮೈನರ್ ಕಮ್ಯೂನಿಟಿಗೆ ಉತ್ತೇಜನ ಕೊಡಲು ಯಾವ ಕ್ರಮ ವನ್ನು ಸರ್ಕಾರದವರು ಅನುಸರಿಸುತ್ತಾ ಇದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ರಾಜ್ಯಾಂಗದಲ್ಲಿ ಪ್ರತಿ ನಿತ್ಯ ಇಲ್ಲದೇ ಇರತಕ್ಕ ಮತ್ತು ಅಲ್ಪ ಪ್ರಾತಿನಿಧ್ಯ ಇರ ತಕ್ಕ ಹಿಂದುಳಿದ ಪಂಗಡದವರಿಗೆ ಪ್ರಾತಿನಿಧ್ಯ ಕೊಡ ಬೇಕೆಂದು ವಿಧಾಯಕವಾಗಿದೆ. ಆ ಪ್ರಕಾರ 'ಸಾದರು' ಕಮ್ಯೂನಿಟಿ ಕೂಡ ಹಿಂದುಳಿದ ಕಮ್ಯೂನಿಟಿ, ಪ್ರಾತಿನಿಧ್ಯ ಇಲ್ಲದ ಅಥವಾ ಅಲ್ಪಪ್ರಾತಿನಿಧ್ಯ ಇರುವ ಪಂಗಡ. ಆದರೆ, ಅವರಿಗೂ ಕೂಡ ರಾಜ್ಯಾಂಗದ ಮತ್ತು ಸರ್ಕಾರದ ರೂಲ್ಸ್‌ಪ್ರಕಾರ ಕೆಲವು ರಿಯಾಯಿತಿಗಳು ಸಿಕ್ಕುತ್ತವೆ.

ಶ್ರೀ ಡಿ. ಎಂ. ಗೋವಿಂದರಾಜು.—ಸರ್ಕಾರದಲ್ಲಿ ಅವರಿಗೆ ಸರಿಯಾದ ಪ್ರಾತಿನಿಧ್ಯ ಇಲ್ಲ ಎಂಬುದು ಸರ್ಕಾರದವರಿಗೆ ಗೊತ್ತೇ ?

Sri Kadidal MANJAPPA.—I want notice.

ಶ್ರೀ ಕೆ. ಹನುಮಂತಯ್ಯ.—ಈ ಸಬ್ -ಕಮ್ಯೂನಿಟಿ ಗಳಿಗೆಲ್ಲಾ ಪ್ರಜಾ ಸಂಖ್ಯೆಯ ಆಧಾರದ ಮೇಲೆ ಕೊಡ ಬೇಕೆಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಬ್ಯಾಕ್ ವರ್ಡ್ ಕಮ್ಯೂನಿಟೀಸ್ ಎಂದು ಯಾರು ಇದ್ದಾರೊ ಅವರಿಗೆ ಪ್ರಾತಿನಿಧ್ಯ ಕೊಡಬಹುದೇ ಹೊರತು, ಎಲ್ಲ ದ್ದರೂ ದಾಮಾಷ ಪ್ರಕಾರ ಹಂಚಬೇಕು ಎಂಬ ನೀತಿ ಯನ್ನನುಸರಿಸುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಇಂಥಿಂಥ ಮೈನರ್ ಕಮ್ಯೂನಿಟೀಸ್‌ನವರಿಗೆ ತೊಂದರೆ ಇದೆ ಎಂಬುದನ್ನು ಹೇಗೆ ಕಂಡುಹಿಡಿಯುತ್ತೀರಿ ?

ಶ್ರೀ ಕೆ. ಹನುಮಂತಯ್ಯ.—ಅದಕ್ಕೇನೂ ತೊಂದರೆ ಆಗುವುದಿಲ್ಲ.

ಶ್ರೀ ಎ. ಆರ್. ನಾಯ್ಡು.—ನಮ್ಮ ಭಾರತದಲ್ಲಿ ಜಾತ್ಯಾತೀತ ಸಮಾಜವನ್ನು ರಚನೆ ಮಾಡುವುದು ಸರ್ಕಾರದವರ ಗುರಿ ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎ. ಆರ್. ನಾಯ್ಡು.—ಇಂಥಿಂಥವರು ಇಂ ಥಿಂಥಾ ಜಾತಿಗೆ ಸೇರಿದವರು ಎಂಬುದನ್ನು ಗೊತ್ತು ಮಾಡುವುದು ಹೇಗೆ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲರೂ ಇಂಥ ಜಾತಿ ಅಂಥ ಜಾತಿ ಅನ್ನುವುದನ್ನು ಬಿಟ್ಟುಬಿಟ್ಟರೆ ಬಹಳ ಸುಲಭವಾಗುತ್ತದೆ.

ಶ್ರೀ ಎಂ. ಮಾದಯ್ಯ.—ಭಾರತ ರಾಜ್ಯಾಂಗದಲ್ಲಿ ಪ್ರಾತಿನಿಧ್ಯ ಇಲ್ಲದೇ ಇರತಕ್ಕವರಿಗೆ ಮತ್ತು ಸಾಲದೇ ಇದ್ದವರಿಗೆ ಸಾಕಾದಷ್ಟು ಪ್ರಾತಿನಿಧ್ಯ ಕೊಡಬೇಕೆಂದು ಹೇಳಿ ಇದೆ ಎಂದು ಆಪ್ಷನ್ ಕೊಡಿಸಿದಿರಿ. ಸಾಕಾ ದಷ್ಟು ಪ್ರಾತಿನಿಧ್ಯ ಇಲ್ಲದೇ ಇರತಕ್ಕ ಕೋಮುಗಳ ವರಿಗೆ ಸಾಕಾದಷ್ಟು ಪ್ರಾತಿನಿಧ್ಯ ಕೊಡುವುದಕ್ಕೆ ಸಾಧ್ಯ ವಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಪಬ್ಲಿಕ್ ಸರ್ವೀಸ್ ಕಮಿಷ್ಷ ವರದಿ ಪ್ರಕಾರ ನೋಡಿದರೆ ಅದಕ್ಕೆ ಒಂದು ಗೊತ್ತಾದ ಲೆಕ್ಕವನ್ನು ಇಟ್ಟುಕೊಂಡಿರುತ್ತಾರೆ.

ಶ್ರೀ ಎಂ. ಮಾದಯ್ಯ.—ಜನಗಣತಿಯ ಅಂಕಿಯಲ್ಲಿ ಹಿಂದೂಗಳು ಎಂದು ತೆಗೆದುಕೊಂಡಿದ್ದಾರೆ. ಅದರಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ, ಇಕ್ವಿಡಿಕ್ಯೇಟ್ ರೆಪ್ರೆ ಸೆಂಟೇಷನ್ ಇರತಕ್ಕ ಕೋಮುಗಳಿಗೆ ಆಡಿಕ್ವೇಟ್ ರೆಪ್ರಸೆಂಟೇಷನ್ ಕೊಡುವುದಕ್ಕೆ ಯಾವ ಮಾರ್ಗ ಅನು ಸರಿಸುತ್ತಾ ಇದ್ದೀರಿ ? ಅದನ್ನು ಕಂಡು ಹಿಡಿಯು ವುದು ಹೇಗೆ ?

ಶ್ರೀ ಕಡಿದಾಳ್ ಮಂಜಪ್ಪ.—ಜನಗಣತಿಯನ್ನು ಕೇಂದ್ರ ಸರ್ಕಾರದ ನಿಬಂಧನೆಗಳ ಪ್ರಕಾರ ಮಾಡ ಲಾಗುತ್ತದೆ. ಮಾನ್ಯ ಸದಸ್ಯರು ಹೇಳತಕ್ಕದ್ದು ಅಭಿ ಪ್ರಾಯದ ಮಾತು.

ಶ್ರೀ ಎಂ. ಮಾದಯ್ಯ.—ಅಭಿಪ್ರಾಯದ ಮಾತಲ್ಲ . . .

Depressed Class Colony in Gonenahal Village, Chilakalanerpu Hobli, Chintamani Taluk (Construction).

Q.—500. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) whether they have received any applications praying for land for the construction of a Depressed Class colony in the gomal lands of Gonenahal Village, Chilakalanerpu Hobli in Chintamani Taluk;

(*b*) if so, whether any action has been taken in writing;

(*c*) whether they would reserve the said land for the depressed class people to build their colony ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) Yes. It is proposed to allot 4 acres of this land for construction of houses by Harijans.

(*c*) *Vide* reply to (*b*).

ಶ್ರೀ ಜೆ. ನಾರಾಯಣಪ್ಪ.—(ಬ) ಪ್ರಶ್ನೆಗೆ ಉತ್ತರ ವಾಗಿ ವಸಾಹತುಗಳನ್ನು ಕಟ್ಟಲು 4 ಎಕರೆಗಳನ್ನು ಕೊಡಬೇಕೆಂದು ಉದ್ದೇಶ ಪಟ್ಟಿದೆ ಎಂದು ಹೇಳಿದ್ದೀರಿ. ಅವರು ವ್ಯವಸಾಯಕ್ಕೆ ಜಮೀನು ಕೇಳಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹತ್ತಿರ, ಆಜುಬಾಜು ಜಮೀನು ಇದ್ದರೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಜೆ. ನಾರಾಯಣಪ್ಪ.—ಅವರ ಅರ್ಜಿಯಲ್ಲಿ ಬರೀ ಮನೆಗಳಿಗೆ ಮಾತ್ರ ಜಮೀನು ಕೊಡಿ ಎಂದು ಹೇಳಿ ಬರೆದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಹೇಳಿರ ತಕ್ಕದ್ದು ಕಾಲೊನಿ ಕಟ್ಟಿಕೊಳ್ಳುವುದಕ್ಕೆ ಜಮೀನು ಬೇಕು ಎಂದು ಕೇಳಿದ್ದಾರೆ.

ಶ್ರೀ ಜೆ. ನಾರಾಯಣಪ್ಪ.—ಊರಿನಲ್ಲಿ ಮನೆ ಕಟ್ಟಿ ಕೊಳ್ಳುವುದಕ್ಕಾದರೆ ಜಮೀನು ಬೇಕಾಗಿಲ್ಲ. ಅವರು ಕೇಳಿರುವುದು ಕಾಡಿನಲ್ಲಿ, ಅದನ್ನೂ ಕೆಲವು ಆಫೀಸರು ಗಳು ಬಂದು ಪರಿಶೀಲನೆಮಾಡಿದ್ದಾರೆ.

ಅಧ್ಯಕ್ಷರು.—ಈ ಪ್ರಶ್ನೆಯಲ್ಲಿ ಅದು ಬರುವುದಿಲ್ಲ. ಮನೆಕಟ್ಟುವುದಕ್ಕೆ ಜಮೀನು ಕೇಳಿದ್ದಾರೆ. ಆ ವಿಷಯ ಕೇಳಿ.